ಹೆಂಗಸು ಮೆಲ್ಲ ಎದ್ದು ಬಂದು ಇವನನ ಗಲ್ಲ ಹಿಡಿದು ಗಟ್ಟಿ ದೃಷ್ಟಿ ನೆಟ್ಟು ಶುದ್ಧ ಹವ್ಯಕ ಭಾಷೆಯಲ್ಲಿ 'ಯೇ ನೀ... ಶೇವ್ಕಾರ ದೊಡ್ಡ ಹೆಗಡೇರ ಮನೆಯ ಶಾರದಕ್ಕನ ಮಗ ಅಲ್ದನಾ?' ಕೇಳಿದಳು. ಸದಾ ಕುಂಡೆಗೆ ಕಟ್ಟಿರುವೆ ಕಚ್ಚಿದಂತೆ ಬೆಚ್ಚಿ ದಿಗ್ಗನೆದ್ದು ನಿಂತ. ಏನು ಮಾತನಾಡಲೂ ತೋರದೆ ಮಿಕಮಿಕ ಅವಳ ಮುಖವನ್ನೇ ನೋಡತೊಡಗಿದ. ಅವಳೇ ಮುಂದಾಗಿ ಕೈ ಹಿಡಿದು ಎಳೆದು ಕೂರಿಸಿದಳು. 'ನಿಂಗ್ಯಾಕೆ ಬೇಕಿತ್ತೋ ಇಂಥ ಹಲ್ಕಾ ಕೆಲಸ? ಅಷ್ಟೊಳ್ಳೆ ಮನೆ ಮಗ ನೀನು. ಅಮ್ಮಂಗೆ ಗೊತಾದ್ರೆ ಎದೆ ಒಡ್ಕಂಡು ಸಾಯ್ತಾಳೆ...' ಅವಳ ಭಾಷೆ ಬದಲಾಗಿತ್ತು.

ಕೂತಲ್ಲಿಯೇ ಕಿವಿ ಪಕ್ಕ, ಹಣೆ, ಎದೆ, ಕಂಕುಳಲ್ಲಿ ಬಳ ಬಳ ಬೆವರು ಇಳಿಯುತ್ತಿರುವುದು ಕಚಗುಳಿಯಿಂದಲೇ ಅವನಿಗೆ ಅರಿವಾಯ್ತು. 'ನಡೆ ಹೋಗು ಇಲ್ಲಿಂದ. ಇನ್ನೊಂದ್ಸಲ ಇಂಥ ಜಾಗಗಳಲ್ಲಿ ಕಂಡ್ರೆ ತೊಡೆ ಮಧ್ಯದ ಸಾಮಾನು ಕುಯ್ದು ಕೈಗೆ ಕೊಡ್ತೇನೆ ತಿಳಿತಾ? ಏನು ಕಮ್ಮಿಯಾಗಿದೆ ನಿಂಗೆ? ನೆಟ್ಗೆ ಬದುಕು ಹೋಗು' ಎಂದು ಅವಳು ಗಡಸು ಧ್ವನಿಯಲ್ಲಿ ಗದರಿದ್ದೇ ಇದ್ದಷ್ಟೂ ಶಕ್ತಿ ಹಾಕಿ ಎದ್ದು ನಿಂತ. ಹಾಗೆ ಹೋದ್ರೆ ತಪ್ಪಾಗ್ತದೆ ಎನಿಸಿ ಹಣಕ್ಕಾಗಿ ಕಿಸೆಗೆ ಕೈ ಹಾಕಿದ್ದೇ ಅದನ್ನು ಅರಿತವಳಂತೆ 'ಥೂ ದರಿದ್ರ ಮಾಣಿ... ನಡಿಯಾ ಅತ್ಲಾಗೆ...' ಎಂದು ಅಬ್ಬರಿಸಿದಳು. ಬಡಬಡ ಬಾಗಿಲತ್ತ ನಡೆದು ಒಮ್ಮೆ ನಿಂತು ತಿರುಗಿ 'ನಿಮ್ಮ ಹೆಸರು?...' ಎಂದು ತಡವರಿಸಿದ. 'ಅದನ್ನು ಕಟ್ಕೊಂಡು ನೀ ಏನ್ ಮಾಡ್ತಿಯೋ?... ಶ್ರಾವಂತಿ... ಶ್ರಾವಂತೀ... ಮಗಳು ಹುಟ್ಟಿದ್ರೆ ಅವಳಿಗಿಡು ಒಳ್ಳೆಯ ಹೆಸರು...' ಎಂದು ಕೋಪದಿಂದ ಬುಸುಗುಟ್ಟಿದಳು. ಅವಳು ಸುಳ್ಳು ಹೇಳುತ್ತಿದ್ದಾಳೆ ಅನಿಸಿತು. ಆದರೂ ಕೇಳಲು ಧೈರ್ಯವಾಗದೆ ವಿಪಿನ್‌ಗೂ ಕಾಯದೆ ಬಡಬಡ ಮೆಟ್ಟಿಲಿಳಿದು ಓಟಕಿತ್ತಿದ್ದ.

ಅವತ್ತು ಬಾಗಿಲ ಬಳಿ ಬಂದು ಹೆಸರು ಕೇಳಲು ತಿರುಗಿದಾಗ ಅವಳ ಚೂಡಿದಾರದ ಸೈಡ್ ಕಟ್‌ನಿಂದ ಹೊರಚಾಚಿದ್ದ ದಪ್ಪ ಹೊಟ್ಟೆಯ ಮಡಿಕೆ ಮತ್ತು ಅದರ ಮೇಲಿನ ತೆಳು ಬಿಳಿ ಗೆರೆಗಳು ಸದಾನ ಮನಸ್ಸಲ್ಲಿ ಕೂತುಬಿಟ್ಟಿದ್ದವು. ಹಾಗೆಯೆ ಮಂಚದ ಮೇಲೆ ಒಗೆದಂತೆ ಬಿದ್ದಿದ್ದ ಅವಳ ವ್ಯಾನಿಟಿ ಬ್ಯಾಗ್‌ಗೆ ಅಂಟಿಸಿದ್ದ ಬಿಳಿ ಹಾಳೆಯ ಮೇಲೆ ಬರೆದಿದ್ದ ಫೋನ್ ನಂಬರ್ ಕೂಡ ಅರ್ಧಮರ್ಧ ಮನಸಲ್ಲಿ ಅಚ್ಚೊತ್ತಿತ್ತು. ಈವತ್ತಿಗೂ ಆ ಘಟನೆಯನ್ನು ನೆನಪಿಸಿಕೊಂಡರೆ ಸದಾನಿಗೆ ಹೊಟ್ಟೆಯ ಮಡಿಕೆಯ ಮೇಲಿನ ಅಸ್ಪಷ್ಟ ಬಿಳಿ ಗೆರೆಗಳು ಮತ್ತು ವ್ಯಾನಿಟಿ ಬ್ಯಾಗ್ ಮೇಲಿನ ಬಿಳಿ ಹಾಳೆಯ ನೆನಪಾಗುತ್ತದೆಯೇ ವಿನಾ ಶ್ರಾವಂತಿಯ ಮುಖವಲ್ಲ.

'ನಾನು ಹಾಗೆ ಓಡಿ ಬರಬಾರದಿತ್ತು. ಧೈರ್ಯದಿಂದ ನಿಂತು ಅವಳು ಎಲ್ಲಿಯವಳು ಅಂತ ವಿಚಾರಿಸಬೇಕಿತ್ತು. ಪಕ್ಕಾ ನಮ್ಮ ಹವ್ಯಕ ಭಾಷೆಯಲ್ಲಿಯೇ ಮಾತನಾಡಿದ್ದಾಳೆ. ನನ್ನಮ್ಮನ ನೆನಪಿನಿಂದ ನನ್ನ ಗುರ್ತು ಹಿಡಿದಿದ್ದಾಳೆ. ಅಂದ್ರೆ ಅಮ್ಮನಿಗೆ ತುಂಬ ಹತ್ತಿರದ ಪರಿಚಯದವಳೇ ಇರಬೇಕು. ಆದರೆ ಎಂದೂ ಊರಲ್ಲಿಯೂ ಮತ್ತೆಲ್ಲೂ ಅವಳನ್ನು ನೋಡಿದ ನೆನಪಂತೂ ಇಲ್ಲ. ಯಾರಿರಬಹುದು? ಯಾಕೆ ಈ ಕೆಲಸಕ್ಕೆ ಇಳಿದಿರಬಹುದು?' ಎಂದೆಲ್ಲಾ ಯೋಚಿಸಿ ಯೋಚಿಸಿ ಸದಾ ಹೈರಾಣಾಗಿದ್ದ. ಹಾಗೆಂದು ಅಮ್ಮನ ಬಳಿ ನೇರವಾಗಿ ಕೇಳುವ ಹಾಗೆಯೂ ಇರಲಿಲ್ಲ.

ಇದೇ ತೊಳಲಾಟದಲ್ಲಿ ಒಂದು ವೀಕೆಂಡ್ ಕಬ್ಬನ್ ಪಾರ್ಕನಲ್ಲಿ ಕೂತು ಮಾತಾಡುತ್ತಾ ಸ್ವಾತಿಯ ಬಳಿ ಎಲ್ಲವನ್ನೂ ಹೇಳಿದ್ದ. ಅವಳು ಒಮ್ಮಿಂದೊಮ್ಮೆಲೇ ಮೌನವಾಗಿಬಿಟ್ಟಿದ್ದಳು. ಬಹುಶಃ ಆ ಹೆಂಗಸಿನ ಬಗ್ಗೆಯೇ ಯೋಚಿಸುತ್ತಿದ್ದಿರಬೇಕು ಎಂಬು ಭಾವಿಸಿ ಸದಾ ಕೂಡ ಹೆಚ್ಚಿಗೆ ಕೆದಕಲಿಲ್ಲ. ಆದರೆ ಅಂದು ರಾತ್ರಿ ಸ್ವಾತಿಯ ನಂಬರ್‌ನಿಂದ 'ಅವಳು ನಿನ್ನನ್ನು ಗುರ್ತು ಹಿಡಿದಿದ್ದು ಎಲ್ಲ ಮುಗಿದ ಮೇಲೇನಾ ಅಥವಾ ಮೊದಲಾ?' ಎಂಬ ಮೆಸೇಜ್ ಬಂದು ತನ್ನ ಇನ್‌ಬಾಕ್ಸ್‌ಗೆ